**ದಿ**: 14-08-2025 **ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.

**ಪಾಟೀ ಸವಾಲುಃ ಶ್ರೀ ಎನ್.ಸಿ.ಎಲ್. ವಕೀಲರಿಂದ ಪ್ರತಿವಾದಿಯ ಪರವಾಗಿಃ**

1. ದಿಃ 10-06-2024 ರಿಂದ ಕೆನರಾ ಬ್ಯಾಂಕ್ ನಲ್ಲಿ ಚೀಫ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ. ದಾಖಲೆಗಳನ್ನು ಪರಿಶೀಲನೆ ಮಾಡಿಯೇ ಸಾಕ್ಷಿ ಕೊಡುತ್ತಿದ್ದೇನೆ. ನನಗೆ ಈ ದಾವಾದಲ್ಲಿ ಸಾಕ್ಷಿ ನುಡಿಯಲು ಅಧಿಕಾರ ಇದ್ದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದೇನೆ. ಈಗ ತೋರಿಸಿದ ನಿಪಿ-1 ರಿಂದ 11(ಎ)ರಲ್ಲಿ ಆ ಅಧಿಕಾರ ಪತ್ರ ಇರುವುದಿಲ್ಲ. ದಾವಾವನ್ನು ದಾಖಲು ಮಾಡುವ ಸಮಯದಲ್ಲಿ ಮ್ಯಾನೇಜರ್ ವಂಶಿನಾಥರವರು ಇದ್ದರು. ದಾವಾವನ್ನು ದಾಖಲು ಮಾಡುವ ಸಮಯದಲ್ಲಿ ವಂಶಿನಾಥರವರೇ ಸಹಿ ಮಾಡಿದ್ದಾರೆ. ಅಧಿಕಾರ ಪತ್ರವನ್ನು ಈ ದಾವಾದಲ್ಲಿ ಸಲ್ಲಿಸಿದ ಬಗ್ಗೆ ನಾನು ನೋಡಿದ್ದೇನೆ. ಈಗ ನನಗೆ ತೋರಿಸಿದ ನಿಪಿ-1 ರಿಂದ 11(ಎ)ರಲ್ಲಿ ವಂಶಿನಾಥರವರ ಅಧಿಕಾರ ಪತ್ರ ಕಂಡು ಬರುವುದಿಲ್ಲ. ಪುನಃ ಹೇಳುತ್ತೇನೆ ವಾದ ಪತ್ರ ಸಲ್ಲಿಸುವ ಕಾಲಕ್ಕೆ ಬ್ಯಾಂಕ್ ನ ಮ್ಯಾನೇಜರ್ ಅಶೋಕ ಟಿ.ಕೆ. ಇದ್ದರು. ಮ್ಯಾನೇಜರ್ ಹೆಸರಿನ ಬಗ್ಗೆ ನನಗೆ confuse ಆಗಿತ್ತು. ಅಶೋಕ ಟಿ.ಕೆ.ಯವರು ಅಧಿಕಾರ ಪತ್ರವನ್ನು ಈ ದಾವಾದಲ್ಲಿ ಸಲ್ಲಿಸಿರುವುದಿಲ್ಲ. ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ನನಗೆ ಅಧಿಕಾರ ಇಲ್ಲದಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿಯು ನಮ್ಮ ಬ್ಯಾಂಕ್ ನಿಂದ ಯಾವುದೇ ಸಾಲ ಪಡೆದುಕೊಂಡಿಲ್ಲ ಅಂದರೆ ಸುಳ್ಳು. ದಾಖಲೆಗಳು ಯಾವ ರೀತಿ ಹಾಜರುಪಡಿಸುತ್ತಾರೆ ಆ ರೀತಿ ನಾವು ಗ್ರಾಹಕರಿಗೆ ಸಾಲವನ್ನು ನೀಡುತ್ತೇವೆ. ಪ್ರತಿವಾದಿಗೆ ನಾವು ಸಾಲ ಕೊಡುವ ಕಾಲಕ್ಕೆ Trade license, KYC documents, loan application, unit verification ದಾಖಲೆಗಳನ್ನು ಪರಿಶೀಲಿಸಿ ಸಾಲವನ್ನು ಕೊಟ್ಟಿದ್ದೇವೆ. ಪ್ರತಿವಾದಿಯು ಮೆಕ್ಕೆಜೋಳ ವ್ಯಾಪಾರ

ಮಾಡುತ್ತಿದ್ದರು ಅಂತ ದಾಖಲೆ ಕೊಟ್ಟಿದ್ದಾರಾ ಅಂದರೆ ನಾನು ಕಛೇರಿಯ ದಾಖಲೆಗಳನ್ನು ನೋಡಿ ಉತ್ತರ ಕೊಡುತ್ತೇನೆ ಮತ್ತು ಕಾಲಾವಕಾಶ ನೀಡಬೇಕು.

ಈ ಹಂತದಲ್ಲಿ ಸಾಕ್ಷಿದಾರರು ಸಮಯ ಕೋರಿರುವುದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,

ದಾವಣಗೆರೆ.